ವಿಚಾರಣೆ ಮಾಡಲು ನಿರ್ದೇಶನ ಕೊಡಲಾಗಿದೆ. ನಿವೃತ್ತ ಮುಖ್ಯೋಪಾಧ್ಯಾಯ ಬಾಬುಶೆಟ್ಟಿಯವರೆ ಪುನರ್ನೇಮಕಾತಿ ಬಗ್ಗೆ ಆಡಳಿತ ಮಂಡಳಿಯವರ ಶಿಫಾರಸ್ಸನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

೪. ಚಿಕ್ಕಬಳ್ಳಾಪುರದ ಬಸ್ ನಿಲ್ದಾಣ ಕಾರ್ಯವನ್ನು ಪೂರ್ಣ ಮಾಡುವುದು

ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾರಪುರ).—ಮಾನ್ಯ ಅಧ್ಯಕ್ಷರೇ, ಚಿಕ್ಕಬಳ್ಳಾಪುರವು ಉಪ ವಿಭಾಗದ ಕೇಂದ್ರವಾಗಿದ್ದು ಇಲ್ಲಿ ನೂತನ ಬಸ್ ನಿಲ್ದಾಣ ಕಟ್ಟುವ ಬಗ್ಗೆ ಸರ್ಕಾರ ಹಿಂದೆಯೇ ಶಿಲಾನ್ಯಾಸ ಮಾಡಿದ್ದು ಇದನಕ್ಕೆ ನಿರ್ಮಾಣ ಕಾರ್ಯ ಕೈಗೊಂಡಿರುವುದಿಲ್ಲ. ಸದರಿ ಬಸ್ ನಿಲ್ದಾಣಕ್ಕೆ ಸರ್ಕಾರ ಎಂಟು ಲಕ್ಷ ರೂಪಾಯಿಗಳನ್ನು ಮೆಚ್ಚಿ ಮಾಡುವುದೆಂದು ಗೊತ್ತಾಗಿದ್ದ ಆದಷ್ಟು ಬೇಗನೆ ನಿರ್ಮಾಣ ಕಾರ್ಯ ಪ್ರಾರಂಭಿಸಬೇಕೆಂದೂ, ಈ ನಿಲ್ದಾಣದ ಪಕ್ಕದಲ್ಲಿ ನಿಲ್ಲುವ ನೀರು ಹರಿದು ಹೋಗುವಂತೆ ಸುಮಾರು ಎರಡು ಲಕ್ಷ ರೂಪಾಯಿಗಳ ಮೆಚ್ಚಿದಲ್ಲಿ ಚರಂಡಿ (ಡ್ರೈನ್) ತೋಡಿಸ ಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಚಿಕ್ಕ ಬಳ್ಳಾಪುರದಲ್ಲಿ ಬಸ್ಸು ನಿಲ್ದಾಣವನ್ನು ನಿರ್ಮಿಸಲು ೧೯೮೮-೮೯ನೆ ಸಾಲಿನ ಆಯವ್ಯಯದಲ್ಲಿ ೮.೦೦ ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ ಹಾಗೂನಿಗಮದ ಕಾರ್ಯನಿರ್ವಾಹಕ ಅಭಿಯಂತರು, ಬೆಂಗಳೂರು, ಇವರು ಈ ಕೆಲಸಕ್ಕೆ ಟೆಂಡರುಗಳನ್ನು ಈಗಾಗಲೇ ಕರೆದಿರುತ್ತಾರೆ ಟೆಂಡರನ್ನು ಹಿಂದಕ್ಕೆ ಪಡೆಯುವ ದಿನಾಂಕ ೨೬-೧೦-೧೯೮೮ ಆಗಿರುತ್ತದೆ. ಟೆಂಡರ್ ಒಪ್ಪಿಗೆ ನೀಡಿದ ನಂತರ ಬಸ್ ನಿಲ್ದಾಣಕೆಲಸವನ್ನು ನಿರ್ವಿಸಲು ಕ್ರಮ ಕೈಗೊಳ್ಳಲಾಗುವುದು. ದಿನಾಂಕ ೧೨-೧೦-೧೯೮೮ ರಂದು ಸ್ಥಳವನ್ನು ತಮ್ಮೊಡನೆ ಹಾಗೂ ನಿಗಮದ ಅಧಿಕಾರಿಗಳೊಡನೆ ಪರಿಶೀಲಿಸಿದ್ದೇನೆ. ನಿಲ್ದಾಣದ ಪಕ್ಕದಲ್ಲಿ ನಿಲ್ಲುವ ನೀರು ಹೊರಗೆ ಹರಿದು ಹೋಗುವುದು ಅವಶ್ಯಕವಾಗಿದೆ. ಈ ಬಗ್ಗೆ ಅವಶ್ಯ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

(ಶ್ರೀ ಜಿ. ಎಸ್. ಆಚಾರ್.—ಸದಸ್ಯರು ಹಾಜರಿಲ್ಲ)

(ಶ್ರೀ ಯಂಕಾ ನಾಯಕ್.—ಸದಸ್ಯರು ಹಾಜರಿಲ್ಲ)

೮-೦೦ ಪಿ.ಎಂ.

೫. ಹರಪನಹಳ್ಳಿ ತಾಲ್ಲೂಕಿನಲ್ಲಿ ವಿಪರೀತ ಮಳೆಯಿಂದಾಗಿ 40 ಮನೆಗಳು ನಾಶವಾಗಿ ಇತರ 900 ಮನೆಗಳು ಭಾಗಶಃ ಹಾನಿಯಾಗಿರುವುದು.

ಶ್ರೀ ಆರ್. ರಾಮಯ್ಯ (ಹಿರಿಯೂರು).—ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯಲ್ಲಿ ಹರಪನಹಳ್ಳಿ ತಾಲ್ಲೂಕಿನಲ್ಲಿ ವಿಪರೀತ ಮಳೆಯ ಪರಿಣಾಮವಾಗಿ ಸುಮಾರು ೪೦ ಮನೆಗಳು ಪೂರ್ಣವಾಗಿ ಬಿದ್ದು ಹೋಗಿ ಸುಮಾರು ೯೦೦ ಮನೆಗಳು ಭಾಗಶಃ ನಾಶವಾಗಿವೆ. ಹೀಗೆ ಸುಮಾರು ಮೂರು ಲಕ್ಷ ರೂಪಾಯಿಗಳು ನಷ್ಟವಾಗಿವೆ. ಈ ಪೈಕಿ ಕೆಲವರಿಗೆ ಮಾತ್ರ ಪರಿಹಾರ ಕೊಡಲಾಗಿದೆ. ಇದಲ್ಲದೆ ಕಳೆದ ೨೦ಗಳು ೦೫ ರಂದು ಸಿಡಿಲು ಬಡಿದು ಹರಪನಹಳ್ಳಿ ತಾಲ್ಲೂಕು ಕಲ್ಲುಮಜ್ಜಿಗೇರಿಯ (ಹರಪನಹಳ್ಳಿ ತಾಲ್ಲೂಕು) ಮಡಿವಾಳ ತಿರುಕಪ್ಪನವರ ಮಗ ೨೧ ವರ್ಷ ವಯಸ್ಸಿನ ಕುಮಾರ ಬಸವರಾಜ ಮೃತನಾಗಿದ್ದಾನೆ. ಇವನ ಕುಟುಂಬಕ್ಕೂ ಪರಿಹಾರವನ್ನು ನೀಡಿಲ್ಲ. ಆದ್ದರಿಂದ ಪರಿಹಾರ ನೀಡಿಲ್ಲದವರಿಗೆ ಹಾಗೂ ಮೇಲ್ಕಂಡ ಕುಮಾರ ಬಸವರಾಜನ ಕುಟುಂಬದವರಿಗೆ ಕೂಡಲೇ ಪರಿಹಾರವನ್ನು ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಪಿ. ಜಿ ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹರಪನಹಳ್ಳಿ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದ ಹಾನಿಗೊಳಗಾದವರಿಗೆ ಪರಿಹಾರ ಕೊಡುವ ಬಗ್ಗೆ ಪ್ರಸ್ತಾಪಿಸಿದ್ದಾರೆ. ೧೯೮೮ರ ಸೆಪ್ಟೆಂಬರ್ ಮಾಹೆಯಲ್ಲಿ ರಾಜ್ಯದ ಇತರೇ ಭಾಗಗಳಲ್ಲಿ ಆದ ಅತಿವೃಷ್ಟಿಯಿಂದ ಹರಪನಹಳ್ಳಿ

ತಾಲ್ಲೂಕಿನಲ್ಲಿಯೂ ಕೂಡ ಕೆಲವು ಪ್ರದೇಶದಲ್ಲಿ ಅತಿವೃಷ್ಟಿ ಆಗಿರುವುದು. ಇದರಿಂದ ಸುಮಾರು ೩೬ ಗ್ರಾಮಗಳಲ್ಲಿ ಸ್ವಲ್ಪ ಹಾನಿ ಉಂಟಾಗಿದೆ. ಸುಮಾರು ೪೦ ಮನೆಗಳು ಪೂರ್ತಿ ಕುಸಿದಿದ್ದು ಸುಮಾರು ೮೩೬ ಮನೆಗಳಿಗೆ ಭಾಗಶಃ ನಷ್ಟ ಉಂಟಾಗಿದೆ.

ಸ್ಥಳೀಯ ಅಧಿಕಾರಿಗಳ ವರದಿಯಂತೆ ಈ ರೀತಿ ಮನೆಗಳಿಗೆ ಹಾನಿ ಉಂಟಾಗಿರುವುದು ಕಂಡುಬರುತ್ತದೆ. ಇತರೆ ಹಾನಿ ಅಥವಾ ನಷ್ಟದ ಬಗ್ಗೆ ವರದಿ ಇರುವುದಿಲ್ಲ. ತೊಂದರೆ ಒಳಗಾದವರಿಗೆ ದಿನಾಂಕ ೮-೬-೧೯೮೮ರ ಪ್ರಕಾರ ಪರಿಷ್ಕೃತ ಸರ್ಕಾರಿ ಆಜ್ಞೆಯಂತೆ ಪರಿಹಾರ ನೀಡಲಾಗುತ್ತಿದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ ಮನೆಗಳಿಗೆ ಆಗಿರುವ ನಷ್ಟದ ಅಂದಾಜು ಸುಮಾರು ರೂ. ೪.೧೮ ಲಕ್ಷ. ನಿಯಮಾನುಸಾರ ಸುಮಾರು ರೂ. ೧.೧೦ ಲಕ್ಷ ಪರಿಹಾರ ನೀಡಬೇಕಾಗುವುದು. ಈಗಾಗಲೇ ರೂ. ೨೫.೦೦೦ ನೊಂದವರಿಗೆ ವಿತರಿಸಲಾಗಿದೆ. ಉಳಿದವರಿಗೆ ಪರಿಹಾರ ನೀಡುವ ಹಂತದಲ್ಲಿ ಇರುವುದು.

೬. ಶಿವಮೊಗ್ಗ ಕ್ಷೇತ್ರದ ಹಳ್ಳಿಯ ದಸ್ತಗಿರ್ ಮತ್ತು ಯೂಸೂಫ್, ಎನ್ನುವ ಕೃಷಿ ಕಾರ್ಮಿಕರ ಮೇಲೆ ಅರಣ್ಯ ಅಧಿಕಾರಿಗಳು ಗುಂಡು ಹಾರಿಸಿರುವುದು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನನ್ನ ಮೂಕದಾರ ಕ್ಷೇತ್ರದ ಹಳ್ಳಿಯಲ್ಲಿ ವಾಸವಾಗಿರುವಂತಹ ಯೂಸೂಫ್ ಮತ್ತು ದಸ್ತಗಿರ್ ಎಂಬ ಮಧ್ಯವಯಸ್ಸಿನ ಇಬ್ಬರು ಕೃಷಿ ಕಾರ್ಮಿಕರು ಸಕ್ಕರೆಬೈಲ್ ಅರಣ್ಯಕ್ಕೆ ಒಣಗಿಬಿದ್ದ ಸೌದೆಯನ್ನು ತರುವುದಕ್ಕೆ ಹೋದಾಗ ಅಲ್ಲಿದ್ದ ಹಿರಿಯ ಅರಣ್ಯಾಧಿಕಾರಿಗಳು ಅವರ ಮೇಲೆ ಗುಂಡನ್ನು ಹಾರಿಸಿದ್ದಾರೆ. ಇದರಿಂದ ತುಂಬಾ ತೀವ್ರತರವಾದ ಗಾಯಗಳು ಅವರಿಗೆ ಆಗಿವೆ. ಕೂಡಲೇ ಅವರಿಗೆ ಚಿಕಿತ್ಸೆ ಮಾಡಿಸಲು ಶಿವಮೊಗ್ಗದಲ್ಲಿರುವ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದರು, ಆದರೆ ಆಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದ ಕಾರಣ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆಂದು ನನಗೆ ತಂತಿ ಸಮಾಚಾರ ಬಂದಿದೆ. ಆಕಸ್ಮಾತ್ ದಾವಣಗೆರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲು ಸಾಧ್ಯವಾಗದಿದ್ದರೆ ತಕ್ಷಣವೇ ಸರ್ಕಾರದವರು ಒಬ್ಬ ಉನ್ನತಾಧಿಕಾರಿಯ ಜೊತೆಯಲ್ಲಿ ಅವರನ್ನು ಬೆಂಗಳೂರಿಗೆ ಕರೆಸುವುದಕ್ಕೆ ಸೂಕ್ತ ವ್ಯವಸ್ಥೆ ಮಾಡಬೇಕು. ಇದರಲ್ಲಿ ಅರಣ್ಯಾಧಿಕಾರಿಗಳದ್ದು ತಪ್ಪಿದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿಸಿ ಅವರ ಮೇಲೆ ಕ್ರಮ ಕೈಕೊಳ್ಳಬೇಕು ಮತ್ತು ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡುವ ವ್ಯವಸ್ಥೆಯಾಗಬೇಕು ಹಾಗೂ ಅವರಿಗೆ ಪರಿಹಾರಕ್ಕಾಗಿ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಟಿಲಿಗ್ರಾಂ ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಹಾಗೂ ಇದನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದ್ದರಿಂದ ಇದರ ಬಗ್ಗೆ ವಿಚಾರಣೆ ಮಾಡುವುದರ ಜೊತೆಗೆ ಫೈರಿಂಗ್‌ನಲ್ಲಿ ಗಾಯಗೊಂಡಿರುವ ಇಬ್ಬರಿಗೆ ದಾವಣಗೆರೆಯಲ್ಲಿ ಸೂಕ್ತ ಚಿಕಿತ್ಸೆ ಸಿಗದಿದ್ದರೆ ಅವರನ್ನು ಬೆಂಗಳೂರಿಗೆ ಕರೆಸಿಕೊಂಡು ಸೂಕ್ತ ಚಿಕಿತ್ಸೆ ಕೊಡಿಸುವ ಬಗ್ಗೆ ಸರ್ಕಾರ ತಕ್ಷಣವೇ ಕ್ರಮ ಕೈಕೊಳ್ಳುತ್ತದೆಂದು ಹೇಳುತ್ತೇನೆ.

ನಿಯಮ ೬೮ರ ಮೇರೆಗೆ ಅಲ್ಪಕಾಲಾವಧಿ ಚರ್ಚೆ.

೭. ದಾವಣಗೆರೆ ಮತ್ತು ಇತರೆ ಕಡೆಗಳಲ್ಲಿ ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿ ಹೋಗಿರುವುದರಿಂದ ಕಾರ್ಮಿಕರು ಬೀದಿಪಾಲಾಗಿರುವುದು.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ನಾನು ಈ ದಿನ ಬೆಳಿಗ್ಗೆ ೮ ಗಂಟೆಗೆ ಬಂದೆ. ಈಗ ರಾತ್ರಿ ೮ ಗಂಟೆಯಾಗಿದೆ. ಒಟ್ಟಿನಲ್ಲಿ ಕಾರ್ಮಿಕರ ಬಗ್ಗೆ ಈ ಸದನದಲ್ಲಿ ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿತು ಎಂಬ ತೃಪ್ತಿಯಿಂದ ನಾನು ತಪುಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಲ್ಲಿ ಅನೇಕ ಸಂದರ್ಭಗಳಲ್ಲಿ ಕಾರ್ಮಿಕರ ಬಗ್ಗೆ ಮಾತನಾಡುವಾಗ ನಾನು ಮಾತನಾಡಿದ್ದು ಕಡಿತಕ್ಕೆ ಹೋಗುವುದಿಲ್ಲ